<u>ದಿಃ 19.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಮುಖ್ಯವಿಚಾರಣೆಃ ಶ್ರೀ ಕೆ.ಇ.ಜೆ., ವಾದಿ ಪರ ವಕೀಲರಿಂದಃ</u>

2. 1 ನೇ ಪ್ರತಿವಾದಿ ಪರವಾಗಿ 2 ನೇ ಪ್ರತಿವಾದಿಯು ದಿಃ 4.8.2016 ಮತ್ತು ದಿಃ 3.10.2016 ರಂದು ವಾದಿಗೆ ಕಳುಹಿಸಿದ್ದ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಇವುಗಳನ್ನು ಕ್ರಮವಾಗಿ ನಿ.ಪಿ-1 ಮತ್ತು ನಿ.ಪಿ-2 ಎಂದು ಗುರುತಿಸಲಾಯಿತು. ದಿಃ 14.10.2016 ರಂದು ವಾದಿಯು 2 ನೇ ಪ್ರತಿವಾದಿಗೆ ಕಳುಹಿಸಿದ್ದ ಉತ್ತರದ ಕಚೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಇದನ್ನು ನಿ.ಪಿ-3 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿ ಪರವಾಗಿ 2 ನೇ ಪ್ರತಿವಾದಿಯು ದಿಃ 19.12.2016 ಹಾಗು ದಿಃ 5.5.2017 ರಂದು ಕಳುಹಿಸಿದ್ದ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಇವುಗಳನ್ನು ಕ್ರಮವಾಗಿ ನಿ.ಪಿ-4 ಮತ್ತು ನಿ.ಪಿ-5 ಎಂದು ಗುರುತಿಸಲಾಯಿತು.

3. ವಾದಿಯು ತನ್ನ ವಕೀಲರ ಮೂಲಕ ದಿಃ 10.10.2017 ರಂದು 2 ಮತ್ತು 3 ನೇ ಪ್ರತಿವಾದಿಯರಿಗೆ ಕಳುಹಿಸಿದ್ದ ನೋಟೀಸನ್ನು ಹಾಜರು ಪಡಿಸಿರುತ್ತೇನೆ. ಇದನ್ನು ನಿ.ಪಿ-6 ಎಂದು ಗುರುತಿಸಲಾಯಿತು. ಸದರಿ ನೋಟೀಸಿಗೆ 2 ನೇ ಪ್ರತಿವಾದಿಯಿಂದ ಬಂದ ಉತ್ತರವನ್ನು ಹಾಜರು ಪಡಿಸಿರುತ್ತೇನೆ. ಇದನ್ನು ನಿ.ಪಿ-7 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದ ಖಾತಾ ಧೃಢೀಕರಣ ಪತ್ರ ಮತ್ತು ಖಾತಾ ನಕಲಿನ ಧೃಢೀಕೃತ

ನಕಲುಗಳನ್ನು ಹಾಜರುಪಡಿಸಿರುತ್ತೇನೆ. ಇವುಗಳನ್ನು ಕ್ರಮವಾಗಿ ನಿ.ಪಿ-8 ಮತ್ತು ನಿ.ಪಿ-9 ಎಂದು ಗುರುತಿಸಲಾಯಿತು. ಆದ್ದರಿಂದ ದಾವಾವನ್ನು ಪುರಸ್ಕರಿಸುವಂತೆ ಕೋರುತ್ತೇನೆ.

ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಪಾಟಿಸವಾಲಿಗೆ ಸಮಯಾವಕಾಶವನ್ನು ಕೋರಿರುತ್ತಾರೆ. ಆದ್ದರಿಂದ ಪಾಟಿಸವಾಲನ್ನು ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.